**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ**

**ಸಿಸಿ ಸಂಖ್ಯೆಃ 2543/2022**

**ಚಾಸಾಃ 14 ಪ್ರಾಸಾಃ 4**

**ಸಾಕ್ಷಿಯನ್ನು ದಿನಾಂಕಃ 09-06-2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಗೋಪಾಲ್ ಹೆಚ್ |
| ತಂದೆ ಹೆಸರುಃ | ಹನುಮಪ್ಪ |
| ವಯಸ್ಸುಃ | 56 |
| ವೃತ್ತಿಃ | ಎಎಸ್ಐ |
| ವಾಸ ಸ್ಥಳಃ | ಬಂಗಾರಪೇಟೆ |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿನಾಂಕ 13.11.2021 ರಿಂದ ಇಲ್ಲಿಯವರೆಗೆ ಬಂಗಾರಪೇಟೆ ಪೋ. ಠಾಣೆಯ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 16.09.2022 ರಂದು ರಾತ್ರಿ ಸಮಯ ಸುಮಾರು 10-15 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ಆರೋಪಿ ವಿರುದ್ಧ ಲಿಖಿತ ದೂರನ್ನು ದಾಖಲಿಸಿದ್ದು, ಸದರಿ ದೂರಿನ ಅನ್ವಯ ಠಾಣಾ ಅಪರಾಧ ನಂಃ 263/2022 ರಂತೆ ದಾಖಲಿಸಿ ಮೂಲ ಪ್ರ ವ ವರದಿ ಹಾಗೂ ದೂರನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ತನಿಖೆಯ ಕಡತವನ್ನು ಚಾಸಾ-15 ರವರಿಗೆ ಹಸ್ತಾಂತರಿಸಲಾಯಿತು.

ಸಾಕ್ಷಿಯು ದಾಖಲಾತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಹಿಯನ್ನು ನಿ ಪಿ - 1 (ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ಪ್ರ ವ ವರದಿ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿಯನ್ನು ನಿ ಪಿ 9 ಎಂದು, ಸಾಕ್ಷಿಯ ಸಹಿ ನಿ ಪಿ 9(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸಿಎಂ ವಕೀಲರಿಂದಃ</u>**

ಚಾಸಾ1 ರವರು ನೀಡಿರುವ ದೂರಿನ ಅನ್ವಯ ನಾನು ಘಟನ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ, ಸಾಕ್ಷಿ ಮುಂದುವರೆದು ನಾನು ಚಾಸಾ-1 ರವರು ನೀಡಿರುವ ದೂರಿನ ಅನ್ವಯ ಪ್ರಕರಣ ಮಾತ್ರ ದಾಖಲು ಮಾಡಿಕೊಂಡಿರುತ್ತೇನೆ. ಮೃತರ ಕುಟುಂಬಕ್ಕೆ ಸಹಾಯ ಮಾಡಲು ಚಾಸಾ1 ರವರು ನೀಡಿರುವ ಸುಳ್ಳುದೂರನ ಅನ್ವಯ ಸುಳ್ಳು ಪ್ರಕರಣವನ್ನು ದಾಖಲು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಸುಕೀತಾ ಎಸ್ ಹದ್ಲಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ